ಶ್ರೀ ಬಿ. ರಾಚಯ್ಯ(ಗೃಹ ಮಂತ್ರಿಗಳು).—

ಅ) ೧) ಪೋಲೀಸ್ ವಲಯ (ವೃತ್ತ) ... ೧೬

೨) ಪೋಲೀಸ್ ಉಪ ವಲಯ ... ೧೯
(ಪೋಲೀಸ್ ಠಾಣೆ)

೩) ಹೊರವಲಯ (ಔಟ್ ಪೋಸ್ಟ್) ... ೨

ಆ) ೧೯೮೪-೮೫ ರಲ್ಲಿ ವಿಜಾಪುರ ಜಿಲ್ಲೆಯಲ್ಲಿ ವಲಯಗಳಾವುವೂ ಮಂಜೂರಾಗಿರುವುದಿಲ್ಲ.

ಇ) ೧೯೮೫-೮೬ ರಿಂದ ೧೯೯೯-೯೦ ರ ವರೆಗೆ ತಯಾರಿಸಲಾಗಿರುವ ಪೂರ್ವಯೋಜಿತ ಯೋಜನೆಯಲ್ಲಿ ಹೊಸ ಪ್ರಸ್ತಾಪಗಳನ್ನು ಅಳವಡಿಸಲು ಪರಿಶೀಲಿಸಲಾಗುವುದು.

ಸರ್ಕಾರೀ ಸಾರ್ವಜನಿಕ ಆಸ್ಪತ್ರೆ.

೫೬೯. ಶ್ರೀ ಕೆ. ಬಿ. ಕೋಳಿವಾಡ(ರಾಣೆಬೆನ್ನೂರು). —ಮಾನ್ಯ ಆರೋಗ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ರಾಣೆಬೆನ್ನೂರು ನಗರಕ್ಕೆ ೩೦ ಹಾಸಿಗೆಗಳ ಸಾರ್ವಜನಿಕ ಆಸ್ಪತ್ರೆಯನ್ನು ಮಂಜೂರು ಮಾಡಿರುವುದು ನಿಜವೇ ?

ಆ) ಹಾಗಿದ್ದಲ್ಲಿ ಈ ಯೋಜನೆಯ ಒಟ್ಟು ವೆಚ್ಚವೆಷ್ಟು ?

ಇ) ಆಯವ್ಯಯದಲ್ಲಿ ಈ ಯೋಜನೆಗೆ ಒದಗಿಸಿದ ಒಟ್ಟು ಮೊತ್ತವೆಷ್ಟು ?

ಈ) ಕಟ್ಟಡದ ಕೆಲಸವನ್ನು ಯಾವಾಗ ಪ್ರಾರಂಭಿಸಲಾಗುವುದು ?

ಶ್ರೀ ಹೆಚ್. ಎಲ್. ತಿಮ್ಮೇಗೌಡ(ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು).—

ಅ) ಬಜೆಟ್‌ನಲ್ಲಿ ಸೇರಿಸಲಾಗಿದೆ. ಮಂಜೂರಾತಿ ವಿಷಯ ಪರಿಶೀಲನೆಯಲ್ಲಿದೆ.

ಆ) ೨೭.೭೭ ಲಕ್ಷ ರೂಪಾಯಿಗಳು.

ಇ) ೪.೦೦ ಲಕ್ಷ ರೂಪಾಯಿಗಳು.

(ಈ) ಯೋಜನೆಯನ್ನು ಮಂಜೂರು ಮಾಡಿದ ನಂತರ.

ಪ್ರಶ್ನೆ. ೧೪೯೧—ಮಾನ್ಯ ಸದಸ್ಯರಾದ ಶ್ರೀ ರವಿವಾಥ ರೈ ಹಾಜರಿಲ್ಲ.

ಪ್ರಶ್ನೆ. ೧೪೮೨—ಮಾನ್ಯ ಸದಸ್ಯರಾದ ಶ್ರೀ ಜಿ. ರಾಮಕೃಷ್ಣ ಹಾಜರಿಲ್ಲ.

ಶ್ರೀ ಬಿ. ಜೆ. ಜಮಖಂಡಿ —ಮಾನ್ಯ ಅಧ್ಯಕ್ಷರೇ, ಬಿಜಾಪುರ ಜಿಲ್ಲೆ ವಿಸ್ತೀರ್ಣ ದೃಷ್ಟಿಯಲ್ಲಿ ರಾಜ್ಯದಲ್ಲೇ ಮೊದಲನೇ ಸ್ಥಾನದಲ್ಲಿದ್ದು, ಜನಸಂಖ್ಯೆ ದೃಷ್ಟಿಯಲ್ಲಿ ರಾಜ್ಯಕ್ಕೆ ಮೂರನೇ ಸ್ಥಾನದಲ್ಲಿದೆ. ಆಗಾಗ್ಗೆ ಬಿಜಾಪುರ, ಬಾಗಲಕೋಟೆ, ಜಮಖಂಡಿಗಳಲ್ಲಿ ಈ ಕೋಮು ಗಲಭೆ, ಕಾರ್ಮಿಕರ ಘರ್ಷಣೆ, ಆಗುತ್ತಿರುವುದರಿಂದ, ಈ ಘರ್ಷಣೆಗಳನ್ನು ನಿಯಂತ್ರಿಸುವ ಸಲುವಾಗಿ ಹೆಚ್ಚು ಪೋಲೀಸ್ ವಲಯ ಗಳನ್ನು, ಉಪ ವಲಯಗಳನ್ನು ಮತ್ತು ಔಟ್‌ಪೋಸ್ಟ್‌ಗಳನ್ನು ಮಾಡುವುದರಿಂದ ಇದನ್ನು ತಪ್ಪಿಸುವುದಕ್ಕೆ ಸಾಧ್ಯವಿದೆ ೧೯೮೪-೮೫ರ ಅವಧಿಯಲ್ಲಿ ಒಂದೂ ಕೂಡ ಈ ಬಗ್ಗೆ ಮಂಜೂರಾಗಿಲ್ಲ ವೆಂದರೆ ಅದು ತಪ್ಪಾಗುತ್ತದೆ. ಆದ್ದರಿಂದ ಮಾನ್ಯ ಮಂತ್ರಿಗಳು, ೮೫-೮೬ ರಿಂದ ೯೦ರವರೆಗೆ ಈ ಯೋಜನೆಅಡಿಯಲ್ಲಿ ಬಿಜಾಪುರ ಜಿಲ್ಲೆಯಲ್ಲಿ ಈ ವಿಷಯದಲ್ಲಿ ಹೆಚ್ಚಿನ ಪ್ರಾಶಸ್ತ್ಯ ಕೊಟ್ಟು ಈ ಗಲಭೆ, ಘರ್ಷಣೆಗಳನ್ನು ತಪ್ಪಿಸಬೇಕೆಂದು ನಾನು ತಮ್ಮ ಮೂಲಕ ಅವರನ್ನು ಕೇಳಿಕೊಳ್ಳುತ್ತೇನೆ.

ಶ್ರೀ ಬಿ. ರಾಚಯ್ಯ.—ಕಳೆದ ವರ್ಷದಲ್ಲಿ ಬರ ಬಂದಿದ್ದರಿಂದ ಜಾಗಕ್ಕೆ ಹೆಚ್ಚಾಗಿ ಹಣ ಒದಗಿಸಲಿಕ್ಕೆ ಸಾಧ್ಯವಾಗಲಿಲ್ಲ. ಆದಕ್ಕೋಸ್ಕರ ಈ ಹೊಸ ಪೋಲೀಸ್ ಠಾಣೆಗಳನ್ನು ಮಂಜೂರು ಮಾಡಲಿಕ್ಕಾಗಲಿಲ್ಲ. ಬಿಜಾಪುರ ಜಿಲ್ಲೆಯಲ್ಲಿ ಐದು ಉಪವಿಭಾಗಗಳು ಬೇಕು ಎಂದು ಕೇಳಿದ್ದಾರೆ. ಐದು ಸರ್ಕಲ್‌ಗಳು ಬೇಕೆಂದೂ ಮತ್ತು ಹದಿನಾರು ಹೊಸ ಪೋಲೀಸ್ ಠಾಣೆಗಳು ಬೇಕೆಂದು ಹೇಳಿದ್ದಾರೆ. ೮೬-೯೭ರಿಂದ ೯೦ವರೆಗೆ ಇದನ್ನು ಕೊಡುವುದಕ್ಕೆ ಪ್ರಯತ್ನ ಮಾಡುತ್ತೇವೆ.

ಪ್ರಶ್ನೆ. ೧೪೦೫—ಮಾನ್ಯ ಸದಸ್ಯರಾದ ಶ್ರೀ ಪಿ. ಬಿ. ಓಂಕಾರಮೂರ್ತಿ ಅವರು ಹಾಜರಿರಲಿಲ್ಲ.

ಪ್ರಶ್ನೆ. ೫೫೧—ಮಾನ್ಯ ಸದಸ್ಯರಾದ ಶ್ರೀ ಚಂದ್ರಶೇಖರ ಮಾವಿನ ಅವರು ಹಾಜರಿರಲಿಲ್ಲ.

ಶ್ರೀ ಕೆ. ಬಿ. ಕೋಳಿವಾಡ್.—ಈ ಯೋಜನೆಗೆ ಹೋದಪರ್ಷ ೪ ಲಕ್ಷ ರೂಪಾಯಿಗಳನ್ನು ಇಡಲಾಗಿತ್ತು. ಈ ವರ್ಷದ ಬಡ್ಜೆಟ್‌ನಲ್ಲಿ ಎಷ್ಟು ಹಣವನ್ನು ಇಡಲಾಗಿದೆ?

ಅಧ್ಯಕ್ಷರು.—ಅದನ್ನು ಬಡ್ಜೆಟ್ ಪುಸ್ತಕದಲ್ಲಿ ಕೊಟ್ಟಿರುತ್ತಾರೆ. ತಾವು ನೋಡಿ.

ಶ್ರೀ ಕೆ. ಬಿ. ಕೋಳಿವಾಡ್.—ಈ ವರ್ಷದ ಬಡ್ಜೆಟ್‌ನಲ್ಲಿ ೭ ಲಕ್ಷ ರೂಪಾಯಿಗಳನ್ನು ಇದಕ್ಕಾಗಿ ಇಟ್ಟಿರುವುದನ್ನು ನೋಡಿದ್ದೇನೆ, ಮಾನ್ಯ ಮಂತ್ರಿಗಳು ಅದನ್ನು ನೋಡಿರಬಹುದೆಂದು ಕೇಳಿದೆ.

ಪ್ರಶ್ನೆ. ೧೪೭೫ (ಮಾನ್ಯ ಸದಸ್ಯರು ಹಾಜರಿಲ್ಲ)

ಪ್ರಶ್ನೆ. ೯೧೮ (ಮಾನ್ಯ ಸದಸ್ಯರು ಹಾಜರಿಲ್ಲ)

ಪ್ರಶ್ನೆ. ೧೧೧೧. (ಮಾನ್ಯ ಸದಸ್ಯರು ಹಾಜರಿಲ್ಲ)

ರಾಜ್ಯದಲ್ಲಿನ ಖಾಸಗಿ ಹಾಗೂ ಸರಕಾರಿ ವೈದ್ಯಕೀಯ ಮಹಾವಿದ್ಯಾಲಯಗಳು

೯೧೨. ಶ್ರೀಮಹಮ್ಮದ್ ಮೊಯಿನುದ್ದೀನ್ (ಚಾಮರಾಜ ಪೇಟೆ).—ಮಾನ್ಯ ಆರೋಗ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸರ್ಕಾರಿ ಮತ್ತು ಖಾಸಗೀ ವೈದ್ಯಕೀಯ ವಿದ್ಯಾಲಯಗಳು ರಾಜ್ಯದಲ್ಲಿ ಎಷ್ಟಿವೆ? ಮತ್ತು ಇವುಗಳ ಹೆಸರುಗಳೇನು?

ಆ) ಭಾರತೀಯ ವೈದ್ಯಕೀಯ ಪರಿಷತ್ತಿನ ಮಾನ್ಯತೆ ಪಡೆಯದಿರುವ ವೈದ್ಯಕೀಯ ವಿದ್ಯಾಲಯಗಳ ಹೆಸರುಗಳೇನು?

ಇ) ಈ ವೈದ್ಯಕೀಯ ವಿದ್ಯಾಲಯಗಳಿಗೆ ಭಾರತೀಯ ವೈದ್ಯಕೀಯ ಪರಿಷತ್ತು ಮಾನ್ಯತೆ ನೀಡದಿರುವುದಕ್ಕೆ ಕಾರಣಗಳೇನು?

ಶ್ರೀ ಎಚ್. ಎಲ್. ತಿಮ್ಮೇಗೌಡ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು).—

ಅ) ರಾಜ್ಯದಲ್ಲಿ ಸರ್ಕಾರಿ ವೈದ್ಯಕೀಯ ವಿದ್ಯಾಲಯಗಳು ನಾಲ್ಕು (೪) ಇವೆ. ಮತ್ತು ಖಾಸಗೀ ವೈದ್ಯಕೀಯ ವಿದ್ಯಾಲಯಗಳು ಹನ್ನೊಂದು (೧೧) ಇವೆ. ಮತ್ತು ಇವುಗಳ ಹೆಸರುಗಳು ಈ ಕೆಳಕಂಡಂತಿದೆ.

I. ಸರ್ಕಾರಿ ವೈದ್ಯಕೀಯ ವಿದ್ಯಾಲಯಗಳ ಹೆಸರುಗಳು.

೧. ಬೆಂಗಳೂರು ವೈದ್ಯಕೀಯ ಮಹಾವಿದ್ಯಾಲಯ, ಬೆಂಗಳೂರು.

೨. ಮೈಸೂರು ವೈದ್ಯಕೀಯ ಮಹಾವಿದ್ಯಾಲಯ, ಮೈಸೂರು.

೩. ಕರ್ನಾಟಕ ವೈದ್ಯಕೀಯ ಮಹಾವಿದ್ಯಾಲಯ, ಹುಬ್ಬಳ್ಳಿ.

೪. ಬಳ್ಳಾರಿ ವೈದ್ಯಕೀಯ ಮಹಾವಿದ್ಯಾಲಯ, ಬಳ್ಳಾರಿ.

II. ಖಾಸಗೀ ವೈದ್ಯಕೀಯ ವಿದ್ಯಾಲಯಗಳ ಹೆಸರುಗಳು ಈ ಕೆಳಕಂಡಂತಿವೆ.

೧. ಸೇಂಟ್ ಜಾನ್ಸ್ ವೈದ್ಯಕೀಯ ಮಹಾವಿದ್ಯಾಲಯ, ಬೆಂಗಳೂರು.

೨. ಎಂ. ಎಸ್. ರಾಮಯ್ಯ ವೈದ್ಯಕೀಯ ಮಹಾವಿದ್ಯಾಲಯ, ಬೆಂಗಳೂರು.

೩. ವೈದ್ಯಕೀಯ ವಿಜ್ಞಾನ ಕೆಂಪೇಗೌಡ ಸಂಸ್ಥೆ, ಬೆಂಗಳೂರು.

೪. ಡಾ॥ ಅಂಬೇಡ್ಕರ್ ವೈದ್ಯಕೀಯ ಮಹಾವಿದ್ಯಾಲಯ, ಬೆಂಗಳೂರು.